

ಧಾರವಾಡದ ಮುರುಘಾಮಠ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಎತ್ತಿನ ಗಾಡಿ ಓಟದ ಸ್ಪರ್ಧೆಯ ಝಲಕ್

ಅಕೀ ಒಂದ್ ಸರ್ತೇ ಏರಗೈ ತೊಗೊಂಡು, 'ಏನೋ ಮುಜಾವರಾ, ಹಿಂಗ್ ಹಿಂದ್ ಉಳದ್ರ ನಿನ್ನ ಅಕ್ಕಡೀ ಜ್ವಾಳಾ ಕೊಯ್ಯವ್ರು ಯಾರು? ನೀ ಹ್ವಾರೇ ಮಾಡೂದೂ ನೋಡಿದ್ರ ಹೆಣ್ಣ್ ಮಕ್ಳು ಸೈತ ನಗತಾರ. ಗುಡ್ಡದಂತಾ ಮಾತು ಮಾತಾಡ್ತೀ, ಕೆಲಸಾ ನೋಡಿದ್ರ ದುಗ್ಗಾಣೇದೂ ಇಲ್ಲ. ಸಮನಾಗಿ ಕೂಲಿ ತೊಗೊಂತೀ, ಹಿಂಗ್ ಕೆಲಸಾ ಮಾಡಿದ್ರ ಯಾರ್ ನಿನ್ನ ಕೂಲೀಗೆ ಕರೀತ್ಯಾರ? ಅದೇನೋ ಅಂತಾರಲ್ಲ, 'ಕಿಸೀಲಿಲ್ಲ ಮಸೀಲಿಲ್ಲ, ಕುಸೂಗಲ್ ಹಾಳಾಗಿತ್ತಂತ' ಹಂಗಾತು ನಿನ್ನ ಬಾಳೇ. ನಾಳಿಂದ ನೀ ನಮ್ಮ ಹೊಲಕ್ಕ ಬರೂದು ಬ್ಯಾಡ' ಅಂತ ಕಡ್ಡೀ ಮುರದಂಗ್ ಹೇಳಿದ್ಯಾಗ ಅಂವನ ಮಕಾ ಮಂಗ್ಯಾನಂಗ್ ಆಗಿತ್ತು. ಗಮನಿಸಿದ್ರೆಲ್ಲ, ಕುಸೂಗಲ್ಲಿನ ನಮ್ಮ ಅಮ್ಮನೂ ಇಲ್ಲೆ ಆ ಗಾದೀ ಮಾತು ಬಳಸಿದ್ಲು.

ಇನ್ನೂ ಬ್ಯಾರೆ ಬ್ಯಾರೆ ಕಡೇಕ್ ಈ ಗಾದಿ ಮಾತು ಬಳಸ್ತಿರಬೇಕು. ಅದಕ್ಕ ಬೇಕಾದಷ್ಟ್ ಸಾಕ್ಷೀನೂ ಇರಬೌದು. ಎಷ್ಟ್ ಕಡೇ ಬಳಸಿದ್ರೂ, ಹ್ವಾರೇ ಮಾಡಲಾರದಽ, ಬರೇ ಮಾತಿನೊಳಗಽ ಮನಿ ಕಟ್ಟೋ ಸೊಂಬೇರಿಗಳಿಗೆ ಅದನ್ನ ಅಂಟಿಸಿ ಹೇಳ್ತಾರನ್ನೂದು ಖರೆ. ಏನೂ ಮಾಡಲರ್ದಽ, ಎಲ್ಲಾ ಮಾಡೇವಿ ಅಂತ ಡೋಂಗೀ ಹೊಡಿಯೋ ಮಂದೀಗೆ ಈ ಗಾದಿ ಮಾತು ಅನ್ವಯಿಸ್ತೈತಿ ಅಂತ ಅದ್ಹೆಂಗೋ ನಾವೆಲ್ಲಾ ತಿಳಕೊಂಡ್ ಬಿಟ್ಟೇವಿ. ಆದ್ರ ಅದಕ್ಕಿರೂ ಖರೇ ಅರ್ಥಕ್ಕೂ, ಈ ಅರ್ಥಕ್ಕೂ ಅಜಗಜಾಂತರ ವ್ಯತ್ಯಾಸ ಐತಿ ಅನ್ನೋದು ಪಾಟೀಲ ಪುಟ್ಟಪ್ಪನವ್ರು ಅವತ್ತು ಬಿಡಿಸಿ ಹೇಳಿದ್ಯಾಗಽ ನನಗ ಗೊತ್ತಾಗಿದ್ದು! ಗಂಭೀರ ಇದ್ದಷ್ಟಽ ಭಾರೀ ಕಿಲಾಡಿ ಮನಶ್ಯಾನೂ ಇದ್ರು ಪಾಟೀಲ ಪುಟ್ಟಪ್ಪನವ್ರು. ಹಂಗಾದ್ರ, ಅವ್ರು ಏನ್ ಹೇಳಿದ್ರೆಪಾ ಅಂತೀರೇನು? ಕೇಳ್ರಿಲ್ಲೆ ಆ ಕಥೀನ.

ಒಂದ್ಸರ್ತೆ ಏನಾತಪಾ ಅಂದ್ರ, ಇಬ್ರು ಹೆಣ್ಮಕ್ಳು ಕೊಡಾ ತೊಗೊಂಡು ನೀರ್ ತರಾಕ್ ಬಾಂವೀಗೆ ಹೊಂಟಿದ್ರಂತ. ಅದರಾಗ ಒಬ್ಳು ಹರೇದಾಕಿ, ಮತ್ತೊಬ್ಳು ಸ್ವಲ್ಪ ವಯಸ್ಸಾದಾಕಿ. ಇದು ಬಾಳ ಹಿಂದ್ ನಡದ್ ಕಥೀ. ಬೋರ್ ಬಾಂವಿ ಮತ್ತ ನಳಾ ಇರಲಾರದ ಕಾಲ್ದಾಗ ಹೊಕ್ಕ ತುಂಬೋ ಬಾಂವೀಲಿಂದನಽ ನೀರು ಹೊತ್ತ ತರಬೇಕಕ್ಕಿತ್ತು. ಹಂಗ್ ಬಾಂವೀಗೆ ಹೋಗೂ ದಾರೀಗೆ 'ನೀರ್ವೊಳಿ ದಾರಿ' ಅಂತ ಕರೀತಿದ್ರು. ನರ್ವೊಳೀ ದಾರಿ ಅಂದ್ರ ಊರ ಮಂದೆಲ್ಲಾ ಅಲ್ಲೇ ತರಗಾ ಬರಗಾ ಹಾದಾಡ್ಬೇಕು. ಹಂಗ್ ಹಾದಾಡೂ ಮಂದಿ ತಮ್ಮ ಸುಖಾ, ದುಃಖಾ, ನೋವು, ನಲಿವು ಎಲ್ಲಾನೂ ಮಾತಾಡ್ಕೊಂತ, ನಕ್ಕೊಂತ ಮತ್ತ್ ಕೆಲವೊಮ್ಮೆ ಅಳಕೊಂತನೂ ಓಡ್ಯಾಡ್ತಿದ್ರು. 'ಅಂವಾ ಅಕಿನ್ನ ಇಟಗೊಂಡಾನಂತ, ಇಕೀ ಅಂವನ ಕೂಡ ಓಡಿ ಹೋದ್ಲಂತ, ಅಕೀ ಬಸರಾಗ್ಯಾಳಂತ, ಇಕೀ ಹಡದಾಳಂತ ಹಿಂಗ್ ಸುರೂವಾಗಿ ಸತ್ತಿದ್ದು, ಹುಟ್ಟಿದ್ದು, ಹಬ್ಬಹುಣವಿ ಜಡ್ಡುಜಾಪತ್ರಿ, ಅಡಗಿ ಅಂಬಲಿಈ ರೀತಿ ಅಲ್ಲೆ ಮಾತಾಡಲಾರದ್ ವಿಷಯಾನ ಇರ್ತಿರ್ಲಿಲ್ಲ. ಹಿಂಗಾಗಿ ನೀರ್ವೊಳಿ ದಾರೆಂದ್ರ ನಮ್ಮ ಉತ್ತರ ಕರ್ನಾಟಕದೊಳಗ ಒಂದ್ನಮೂನಿ 'ಪಬ್ಲಿಕ್ ಬ್ರಾಡ್‌ಕಾಸ್ಟಿಂಗ ಲೈವ್ ರೇಡಿಯೋ' ಇದ್ದಂಗಿತ್ತು. ನೀರ್ ತರಾಕ್ ಹೋಗೂ ಹೆಣ್ಮಕ್ಳಂತೂ ಮನ್ಯಾಗ್ ಮಾತಾಡಲಾರದ್ ವಿಷಯಾನ ಅಲ್ಲೆ ಕಳ್ಳ ದನೀಲೆ ಮಾತಾಡ್ಕೊಂತ ತಮ್ಮ ಸುಖಾದುಃಖಾ ತೋಡ್ಕೊಂತಿದ್ರು. ಅಲ್ಲೆ ಇನ್ನೂ ಏನೇನ್ ಮಾತು ಬರ್ತಿದ್ವು ಅನ್ನೂದನ್ನ ಪೂರಾ ಹೇಳ್ಕೊಂತ ಹೊಂಟ್ರ, ಹದಿನೆಂಟು ದಿನಾ ಪುರಾಣಾ ಹಚ್ಚಿ ಹೇಳಿದ್ರೂ ಮುಗೀಲಾರದ ಕಥೀ ಅದು.

ಹಂ, ಅವತ್ತ ನೀರ್ ತರಾಕ್ ಆ ಇಬ್ರೂ ಹೆಣ್ಮಕ್ಳು ಬಾಂವೀಗೆ ಏನ್ ಹೊಂಟಿದ್ರಲ್ಲ, ಅವರ ಪೈಕಿ ಹರೇದ್ ಹೆಣ್ಮಗ್ಳು ತನ್ನ ಸೀರೀ ಸೆರಗ್ಲೇ ಒಂದ್ ಕಡೆ ಗಲ್ಲಾ, ಅಂದ್ರ ಕಪಾಳಾ ಮುಚ್ಕೊಂಡಿದ್ಲಂತ. ಇದನ್ನ ನೋಡಿದ ಹಿರೇದಕೀಗೆ ಒಳಗೊಳಗಽ ಏನೋ ಸಂಶೇ ಬರಾಕ್ಹತ್ತೇತಿ! ಒಂದ್ ಮಜಾ ಏನಂದ್ರ ಕಪಾಳ ಮುಚಕೊಂಡಿದ್ದ ಹರೇದಾಕೀಗೆ ಮದುವ್ಯಾಗಿ ಎಂಟೊಂಬತ್ತ್ ವರ್ಷಾಗಿದ್ರೂ ಇನ್ನೂ ಮಕ್ಳಽ ಆಗಿರ್ಲಿಲ್ಲಂತ. 'ಅಕೀ ಕಪಾಳದ ಸುದ್ದಿ ನನಗ್ಯಾಕ ಬಿಡು' ಅಂತ ಮನಸಿನ್ಯಾಗ ಅನ್ಕೊಂತನಽ, ಹಿರೇದಾಕಿ ಹಗೂರ್ಕ 'ಅಲ್ಲ ತಂಗೀ ನಿನ್ನ ಲಗ್ನಾಗಿ ಎಂಟತ್ತ್ ವರ್ಷಾದ್ವು, ಇನ್ನೂ ಚೊಲೋ ಸುದ್ದೀನೂ ಕೊಡವಲ್ಲ್ಯಲ್ಲ ನೀನು? ಏನ್ ಹಕೀಕತೀ?' ಅಂತ ಹಗೂರ್ಕ ಮಾತ್ ತಗದ್ಳಂತ. ಅದನ್ನ ಕೇಳಿದ ಹರೇದ್ ಹೆಣ್ಮಗ್ಳೀಗೆ ಒಳಗೊಳಗಽ ಸಂಗ್ಟ್ ಸುರೂವಾಗೇತಿ. ಖರೇ ಹೇಳೂವಂಗೂ ಇಲ್ಲ, ಮುಚ್ಚಿ ಇಟಗೊಳ್ಳೂವಂಗೂ ಇಲ್ಲ. ಹಿಂತಾ ವಿಷಯದಾಗ ಹೆಣ್ಮಕ್ಳೀಗೆ ಬಾಳ ಕುತೂಹಲ ಏನ್ರಿಪಾ!

ಪಾಪ, ಆ ಹರೇದ್ ಹೆಣ್ಮಗ್ಳು ಏನ್ ಮಾಡ್ಬೇಕು? ಹಂಗಽ ನಾಚ್ಕೋತ, 'ಏನ್ ಅಂವಸರ ಬಿಡಬೇ ಯವ್ವಾ' ಅಂತ ಹಾರಿಕಿ ಉತ್ರಾ ಕೊಡಾಕ್ ಪ್ರಯತ್ನಾ ಮಾಡ್ಯಾಳ. ಹಿರೇದಾಕಿ ಬಿಡಬೇಕಲ್ಲ? ಬಿಡೂ ಹೆಣ್ಮಗಳೇನೂ ಆಗರ್ಲಿಲ್ಲ ಆಕಿ. ಇಷ್ಟೆಲ್ಲಾ ಮಾತು ನಡದಿರುವಾಗುನೂ ಆ ಹುಡುಗಿ ತನ್ನ ಒಂದ್ ಗಲ್ಲದ ಮ್ಯಾಲ ಇಟ್ಟಿದ್ದ ಕೈ ತಗದಽ ಇರ್ಲಿಲ್ಲಂತ! ಅಕಿ ಹಂಗ್ ಒಂದ್ ಕಪಾಳಾ ಮುಚಗೊಂಡಿದ್ದು ನೋಡಿ ಹಿರೇದಕೀಗೆ ಏನೋ ಸಂಶೆ ಬರಾಕ್ಹತ್ತೈತಿ. ಇದರಾಗೇನೋ ಮಜಕೂರ ಐತಿ ಅಂತ ಅಕೀಗೆ ಗುಮಾನಿ! ಅದಕ್ಕ ಅಕೀ, 'ಅಲ್ಲ ತಂಗೀ ನಿನ್ನ ಗಲ್ಲಕ್ಕ ಏನಾಗೈತಿ? ಅದನ್ಯಾಕ ಮುಚಗೊಂಡೀ? ತಗದರ ತಗೀ ಕೈಯ್ನ'